


ನನಗೆ ಸಾಹಿತ್ಯ ಅನ್ನುವಂತದ್ದು ಓದುವಾಗ ಮತ್ತು ಬರೆಯುವಾಗ ಕಾಣುವ ಎಚ್ಚರದ ಕನಸು.

ಸಂಬಂಧವೇನು?

ಕೇರಳದಲ್ಲಿ ಎಡಪಂಥೀಯ ಮನೋಧೋರಣೆ ಪ್ರಬಲವಾಗಿದೆ ಎನ್ನಬಹುದು. ಇದರಲ್ಲಿ ಇರುವವರೆಲ್ಲ ಪಕ್ಷದ ಕಾರ್ಯಕರ್ತರಲ್ಲ. ಆದರೆ, ಸರ್ವಾಧಿಕಾರವನ್ನು ದ್ವೇಷಿಸುವ, ವಿರೋಧಿಸುವ ಮನಸ್ಥಿತಿ ಬಹಳ ಗಟ್ಟಿಯಾಗಿದೆ. ಇನ್ನೂ ಒಂದಿದೆ, ಇಲ್ಲಿ ಈಗ ರಾಜಕೀಯ ಶಿಕ್ಷಣ ಮತ್ತು ಅದರ ಬಗೆಗಿನ ಎಚ್ಚರಿಕೆಯು ಕುಂಠಿತಗೊಂಡಿದೆ. ರಾಜಕೀಯ ಪಕ್ಷಗಳು ಕೇವಲ ಮೇಲ್ಮೈ ರಾಜಕೀಯ ಪ್ರಜ್ಞೆಯುಳ್ಳಂತವಾಗಿವೆ. ರಾಜಕೀಯ ಪ್ರಜ್ಞೆಯ ಆಳ, ವಿಸ್ತಾರಗಳು ಕುಗ್ಗುತ್ತಿವೆ. ಆರ್.ಎಸ್.ಎಸ್.ನ ಶಾಖೆಗಳು ಬಹುಸಂಖ್ಯೆಯಲ್ಲಿ ಇರುವುದು ಕೇರಳದಲ್ಲಿಯೇ. ಅಸೆಂಬ್ಲಿಯಲ್ಲಿ ಅವರಿಗೆ ಒಂದೇ ಒಂದು ಸೀಟು ಕೂಡ ಬರಲಿಲ್ಲ. ಆದರೆ, ಮುಸ್ಲಿಂ ಲೀಗ್ ಮತ್ತು ಕೇರಳ ಕಾಂಗ್ರೆಸ್ (ಕ್ರಿಶ್ಚಿಯನ್ ರಾಜಕೀಯ ಪಕ್ಷಗಳು) ಸ್ಥಾನ ಗಳಿಸಿಕೊಂಡವು.

◆ **ಭಾರತದಂತಹ ದೇಶದಲ್ಲಿ ಜಾತಿಯ ಹೊರತಾಗಿ ನಿಷ್ಠುರವಾಗಿ ಯೋಚಿಸುವುದು ಮತ್ತು ಬರೆಯುವುದು ಸಾಧ್ಯವೆ? ಒಬ್ಬ ಲೇಖಕನಿಗೆ ಈ ಬೇಲಿಯನ್ನು ದಾಟುವುದು ಎಷ್ಟು ಮುಖ್ಯ?**

ಜಾತೀಯತೆಯ ರೋಗವನ್ನು ನಾನು ಆತ್ಯಂತಿಕವಾಗಿ ದ್ವೇಷಿಸುತ್ತೇನೆ. ಸಾಮಾಜಿಕ ಸಮಾನತೆಯನ್ನು ಬಿತ್ತುವ ಆಧ್ಯಾತ್ಮಿಕತೆಯು ನನ್ನ ಕನಸು. ಜಾತಿ, ಧರ್ಮ ಮತ್ತು ಜನಾಂಗೀಯತೆಯ ಕಿರುಕುಳಗಳು ನನ್ನಲ್ಲಿ ಅಸಹ್ಯ ಹುಟ್ಟಿಸುತ್ತವೆ. ಪ್ರಪಂಚದ ಪ್ರತಿಯೊಂದು ಸಮಾಜವೂ ಸಮಾನತೆಯ ಅವಕಾಶಕ್ಕಾಗಿ ಎದುರು ನೋಡುತ್ತಿರುತ್ತದೆ. ನನ್ನ ಬದುಕು ಹದಿನೈದನೇ ವಯಸ್ಸಿನಲ್ಲಿ ಒಂದು ಹೋಟೆಲಿನಲ್ಲಿ ಪಾತ್ರೆ ತೊಳೆಯುವ ಕೆಲಸದಿಂದ ಶುರುವಾಯಿತು. ಸಮಾಜದ ಕೊಳೆ ತೊಳೆಯುತ್ತಿರುವ ಪ್ರತೀಕವಾಗಿ ಪಾತ್ರೆಯನ್ನು ಶುಚಿಯಾಗಿಸುತ್ತಲೇ ಇರುವ ಒಬ್ಬ ವ್ಯಕ್ತಿ ನನ್ನ ಬರಹಗಳಲ್ಲಿ ಕಾಣುತ್ತಾನೆ. ಈ ಕ್ಷಣಕ್ಕೂ ನಾನು ಕೆಟ್ಟ ಸಮಾಜದ ಹೃದಯದಿಂದ ಬರುತ್ತಲಿರುವ ಕೊಳೆ-ತಟ್ಟೆಗಳನ್ನು ತೊಳೆಯುತ್ತ ಇದ್ದೇನೆ...

●